**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ**

**ಚಾಮರಾಜನಗರ**

**ದಿನಾಂಕಃ 12ನೇ ಫೆಬ್ರವರಿ 2026**

**ಸಿಸಿ.ನಂ.2844/2022**

**ಪಿರ್ಯಾದುದಾರರು ಃ ರಾಜ್ಯದ ಪರವಾಗಿ ಚಾಮರಾಜನಗರ**
**ಗ್ರಾಮಾಂತರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿಗಳು ಃ ಸಿದ್ದರಾಜನಾಯಕ ಮತ್ತು ಇನ್ನೊಬ್ಬರು**

**ಆ.1. ಸಿದ್ದರಾಜನಾಯಕ ,**
ಬಿನ್ ಲೇಟ್ ಲಿಂಗನಾಯಕ ,
ವಯಸ್ಸು 40 ವರ್ಷ,

**ಆ.2. ಗಂಗಮಣಿ** ,
ಕೋಂ ಸಿದ್ದರಾಜನಾಯಕ ,
ವಯಸ್ಸು 35 ವರ್ಷ,
**ಇಬ್ಬರ ವಾಸಃ** ತಮ್ಮಡಹಳ್ಳಿ ಗ್ರಾಮ,
ಚಾಮರಾಜನಗರ ತಾಲ್ಲೂಕು.

**ದೋ ಷಾ ರೋ ಪ ಣೆ**

**ಶ್ರೀಮತಿ ಸ್ಮಿತಾ ನಾಗಲಾಪೂರ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಾಮರಾಜನಗರ, ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.**

ಚಾಮರಾಜನಗರ ತಾಲ್ಲೂಕು ತಮ್ಮಡಹಳ್ಳಿ ಗ್ರಾಮದ ಚಾಸಾ 2 ನಂಜುಂಡನಾಯಕರವರು ಹರವೆ ರಂಗಸ್ವಾಮಿ ನಾಯಕ ಎಂಬುವವರ ಜಾಗದಲ್ಲಿ ಹೊಟೆಲ್ ನಡೆಸುತ್ತಿದ್ದು, ಸದರಿ ಜಾಗದ ವಿಚಾರವಾಗಿ 1ನೇ ಆರೋಪಿಯಾದ ನೀವು ಗಲಾಟೆ ಮಾಡುತ್ತಿದ್ದರಿಂದ ಚಾಸಾ 2 ರವರು ಹೋಟೆಲ್ ನಡೆಸುವುದನ್ನು ನಿಲ್ಲಿಸಿದ್ದು, ದಿನಾಂಕ 25.08.2022ರಂದು ಪುನಃ 1ನೇ ಆರೋಪಿಯಾದ ನೀವು ಚಾಸಾ 2 ರವರ ಜೊತೆ ಗಲಾಟೆ ಮಾಡಿದ್ದು, ಈ ವಿಚಾರವಾಗಿ ಚಾಸಾ 1 ರವರು 1ನೇ ಆರೋಪಿಯ ಮೇಲೆ ದೂರು ಕೊಟ್ಟಿದ್ದು, ಅದೇ ದಿನ ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ 1 ಜಯಲಕ್ಷ್ಮಿ ಮತ್ತು ಚಾಸಾ 2 ನಂಜುಂಡನಾಯ್ಕರವರು ಮನೆಯಲ್ಲಿದ್ದಾಗ 1 ಮತ್ತು 2ನೇ ಆರೋಪಿಗಳಾದ ನೀವು ಚಾಸಾ 1 ರವರ ಮನೆಯ ಮುಂದೆ ಹೋಗಿ, 1ನೇ ಆರೋಪಿಯು ಚಾಸಾ 2

ರವರನ್ನು ನೀವು ಹೋಟೆಲ್ ಹಾಕಿರುವ ಜಾಗ ನಮಗೆ ಸೇರಬೇಕೆಂದರೂ ನಮ್ಮ ಮಾತನ್ನು ಕೇಳದೇ ಪೊಲೀಸಿನವರಿಗೆ ಕಂಪ್ಲೆಂಟ್ ಕೊಟ್ಟಿದ್ದೀರಾ ಎಂದು ಹೀನಾಮಾನವಾಗಿ ಬೈದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ, ಮೇಲಿನ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ 1 ಜಯಲಕ್ಷ್ಮಿರವರ ಮನೆಯ ಬಾಗಿಲಿಗೆ ಹೊಡೆದು ಬಾಗಿಲಿನ ಹಲಗೆಯನ್ನು ಮುರಿದು ಹಾಕಿ, ಬಾಗಿಲನ್ನು ಜಖಂಗೊಳಿಸಿದ್ದರಿಂದ ರೂ.8,000/–ಗಳ ನಷ್ಟವಾಗಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.427 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ, ಮೇಲಿನ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 2ನೇ ಆರೋಪಿಯಾದ ನೀವು ಚಾಸಾ 1 ಜಯಲಕ್ಷ್ಮಿಯವರನ್ನು ಬಾ ಬಡ್ಡಿ ನಿನಗೆ ಕೊಬ್ಬು ಜಾಸ್ತಿಯಾಗಿದೆ ಎಂದು ಬೈದು, ಸಾರ್ವಜನಿಕವಾಗಿ ಅವರ ಕೈಹಿಡಿದು ಎಳೆದಾಡಿ, ಅವರು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದು ಹಾಕಿ ಸಾರ್ವಜನಿಕವಾಗಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.354(ಬಿ) ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಕೊನೆಯದಾಗಿ, ಮೇಲಿನ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ಮತ್ತು 2ನೇ ಆರೋಪಿಗಳಾದ ನೀವು ಚಾಸಾ 1 ಜಯಲಕ್ಷ್ಮಿಯವರನ್ನು ಜಾಗದ ವಿಚಾರವಾಗಿ ಪುನಃ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆಃ ದೋಷಾರೋಪಣೆ ಓದಿ ಹೇಳಿದುದು ಅರ್ಥವಾಯಿತೇ?

ಆರೋಪಿ 1 ರವರ ಉತ್ತರಃ

ಆರೋಪಿ 2 ರವರ ಉತ್ತರಃ

ಪ್ರಶ್ನೆಃ ಆರೋಪಣೆಗೆ ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕಾ?

ಆರೋಪಿ 1 ರವರ ಉತ್ತರಃ

ಆರೋಪಿ 2 ರವರ ಉತ್ತರಃ

(ಮೇಲ್ಕಂಡ ಆರೋಪಗಳ ಬಗ್ಗೆ ಆರೋಪಿತರಾದ ನೀವುಗಳು ಈ ಮಾನ್ಯ ನ್ಯಾಯಲಯದಲ್ಲಿ ವಿಚಾರಣೆಗೊಳತಕ್ಕದ್ದು ಎಂದು ನಾನು ನಿರ್ದೇಶಿಸುತ್ತೇನೆ.)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ.,**

**ಚಾಮರಾಜನಗರ.**